# 15,000 ಕೋಟಿ ಹಾನಿ

## ಉ.ಕರ್ನಾಟಕಕ್ಕೆ ಕಾಡುತ್ತಿರುವ ವರುಣ | ತೋಟಗಾರಿಕೆ ಬೆಳೆ ನಾಶ

## ಮೊದಲನೇ ಸುತ್ತಿಗಿಂತಲೂ ಎರಡನೇ ಸುತ್ತಿನಲ್ಲೇ ಅಪಾರ ಹಾನಿ

**ಬೆಂಗಳೂರು/ಹುಬ್ಬಳ್ಳಿ:** ಉತ್ತರ ಕರ್ನಾಟಕದ ಪಾಲಿಗೆ ಯಮಸ್ವರೂಪಿಯಾಗಿರುವ ಮಳೆರಾಯ, ಭಾರೀ ಪ್ರಮಾಣದ ನಷ್ಟಕ್ಕೆ ಕಾರಣವಾಗಿದ್ದಾನೆ! ಇದರ ಮಧ್ಯೆ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅ.21ರಂದು ಉತ್ತರ ಕರ್ನಾಟಕ ಭಾಗದಲ್ಲಿನ ನೆರೆ ಪರಿಸ್ಥಿತಿ ಅವಲೋಕಿಸುವ ಸಲುವಾಗಿ ತೆರಳಲಿದ್ದಾರೆ.

ಒಂದೇ ವರ್ಷದಲ್ಲಿ 2ನೇ ಬಾರಿಗೆ ಭಾರೀ ಪ್ರಮಾಣದಲ್ಲಿ ಮಳೆ ಮತ್ತು ನೆರೆ ಹಾನಿಯಾಗುತ್ತಿದೆ. ಮೊದಲ ಬಾರಿಗಿಂತಲೂ ಈ ಬಾರಿಯೇ ಹೆಚ್ಚು ಹಾನಿಯಾಗಿದೆ ಎಂದು ಅಂದಾಜಿಸಲಾಗುತ್ತಿದೆ. ಕೃಷಿ, ತೋಟಗಾರಿಕೆ ಬೆಳೆ ನಾಶ ಸೇರಿದಂತೆ ನಷ್ಟ ಪ್ರಮಾಣ 15 ಸಾವಿರ ಕೋಟಿ ರೂ. ಮೀರುವ ಅಂದಾಜು ಇದೆ.

- **ನಾಳೆ ನಷ್ಟ ಸಮೀಕ್ಷೆ ನಡೆಸಲಿದ್ದಾರೆ ಸಿಎಂ ಬಿಎಸ್‌ವೈ**
- **ನಿಖರ ಸಮೀಕ್ಷೆ ಬಳಿಕ ಸ್ಪಷ್ಟ ಚಿತ್ರಣ**

ಕಲಬುರಗಿ, ಯಾದಗಿರಿ, ವಿಜಯಪುರ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಭಾರೀ ಪ್ರಮಾಣದಲ್ಲಿ ಬೆಳೆ, ಮೂಲ ಸೌಕರ್ಯ ಹಾಳಾಗಿದೆ. ನೀರಿನ ಪ್ರಮಾಣ ತಗ್ಗಿದ ನಂತರ ಹಾನಿ, ನಷ್ಟದ ಸಮೀಕ್ಷೆ ನಡೆಯಲಿದ್ದು ಆ ಬಳಿಕವಷ್ಟೇ ಹಾನಿ ಪ್ರಮಾಣದ ನಿಖರ ವಿವರ ಗೊತ್ತಾಗಲಿದೆ.

**ಕಾಡುತ್ತಿರುವ ಭೀಮೆ:** ಭೀಮಾನದಿ ಪಾತ್ರದಲ್ಲಿ ಕಾಣಿಸಿಕೊಂಡಿರುವ ಪ್ರವಾಹಕ್ಕೆ ಈ ಬಾರಿ ಸಾಕಷ್ಟು ಹಾನಿಯಾಗಿದೆ. ಮಳೆ ತೀವ್ರತೆಗೆ ಕೃಷಿ - ತೋಟಗಾರಿಕೆ ಬೆಳೆ ದೊಡ್ಡ ಪ್ರಮಾಣದಲ್ಲಿ ನಾಶವಾಗಿವೆ. ಸದ್ಯದ ಮಟ್ಟಿಗೆ 3000 ಕೋಟಿ ರೂ. ಬೆಳೆ ನಷ್ಟವಾಗಿರುವ ಅಂದಾಜು ಇದೆ.

▶ 7ನೇ ಪುಟಕ್ಕೆ



ಕಂದಾಯ ಸಚಿವ ಆರ್.ಅಶೋಕ ಹುಕ್ಕೇರಿ ತಾಲೂಕಿನ ಜೀರಗಾಳ ಗ್ರಾಮಕ್ಕೆ ಭೇಟಿ ನೀಡಿ ಬೆಳೆ ಹಾನಿ ಪರಿಶೀಲನೆ ನಡೆಸಿದರು.

**117**
ಹಾನಿಗೊಳಗಾದ, ಸ್ಥಳಾಂತರವಾದ ಗ್ರಾಮ (ಬಹುಪಾಲು)

**43,158**
ಸ್ಥಳಾಂತರಗೊಂಡ ಜನ

**217**
ಕಾಳಜಿ ಕೇಂದ್ರಗಳು

**36,631**
ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆದವರು

### ಬೀದರ್
#### 200 ಕೋಟಿಗೂ ಅಧಿಕ ಹಾನಿ

ಭಾರೀ ಮಳೆಯಿಂದಾಗಿ 2.47 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಹಾನಿಯಾಗಿದ್ದು ನಷ್ಟದ ಅಂದಾಜು 200 ಕೋಟಿ ಇರಬಹುದು ಎನ್ನಲಾಗಿದೆ. ಪ್ರಮುಖವಾಗಿ 40 ಸಾವಿರ ಹೆಕ್ಟೇರ್ ಸೋಯಾ ಬೆಳೆ, 20 ಸಾವಿರ ಹೆಕ್ಟೇರ್ ತೊಗರಿ, 10 ಸಾವಿರ ಹೆಕ್ಟೇರ್ ಕಬ್ಬು ಹಾಗೂ 500 ಹೆಕ್ಟೇರ್ ಉದ್ದು ಹಾನಿಯಾಗಿದೆ. ಮಳೆಯಿಂದ ಜಿಲ್ಲೆಯಲ್ಲಿ ಈವರೆಗೆ 9 ಜೀವ ಹಾನಿಯಾಗಿದೆ. 1673 ಮನೆಗಳು ಭಾಗಶಃ ಹಾನಿಯಾಗಿವೆ.

### ಬಾಗಲಕೋಟೆ
#### 857 ಕೋಟಿ ನಷ್ಟ

ಆಗಸ್ಟ್‌ನಿಂದಲೂ ಜಿಲ್ಲೆಯಲ್ಲಿ ಭಾರೀ ಮಳೆಯಾಗುತ್ತಿದೆ. ಈವರೆಗೆ 2576 ಮನೆಗಳು ಬಿದ್ದಿದ್ದು, ಕೃಷಿ, ತೋಟಗಾರಿಕೆ ಹಾಗೂ ರಸ್ತೆಗಳು ಸಹಿತ ಒಟ್ಟಾರೆ 857 ಕೋಟಿ ಹಾನಿಯಾಗಿದೆ. ಇಬ್ಬರು ಮೃತರಾಗಿದ್ದಾರೆ. ಜಿಲ್ಲೆಯಲ್ಲಿ 34869 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿಯಾಗಿದೆ. 105 ಮನೆಗಳು ಪೂರ್ಣ ಪ್ರಮಾಣದಲ್ಲಿ, 26 ಮನೆಗಳು ತೀವ್ರ ಹಾಗೂ 338 ಮನೆಗಳು ಭಾಗಶಃ ಹಾನಿಗೊಳಗಾಗಿವೆ.

### ಧಾರವಾಡ
#### 710 ಕೋಟಿಗೂ ಹೆಚ್ಚು ಹಾನಿ

ಕಳೆದ ಮೂರ್‍ನಾಲ್ಕು ತಿಂಗಳಿನಲ್ಲಿ ಒಟ್ಟು 710 ಕೋಟಿಗೂ ಅಧಿಕ ಮೌಲ್ಯದ ಆಸ್ತಿಪಾಸ್ತಿ ಮತ್ತು ಬೆಳೆ ಹಾನಿಯಾಗಿದೆ. 2880ಕ್ಕೂ ಅಧಿಕ ಮನೆಗಳಿಗೆ ಹಾನಿಯಾದರೆ, 1.7 ಲಕ್ಷ ಎಕರೆ ಕೃಷಿ ಭೂಮಿಯಲ್ಲಿನ ಬೆಳೆ ಹಾಗೂ 4850 ಹೆಕ್ಟೇರ್ ತೋಟಗಾರಿಕೆ ಬೆಳೆಗೆ ಹಾನಿಯಾಗಿದೆ. 6 ಜನರನ್ನು ಮಳೆ ಆಹುತಿ ಪಡೆದಿದೆ ಎಂದು ಜಿಲ್ಲಾಡಳಿತ ನಡೆಸಿದ ಪ್ರಾಥಮಿಕ ಅಧ್ಯಯನ ಮತ್ತು ಸಮೀಕ್ಷೆಯಿಂದ ಗೊತ್ತಾಗಿದೆ.

### ಕಲಬುರಗಿ
#### 3 ತಿಂಗಳಲ್ಲಿ 3 ಬಾರಿ ಪ್ರವಾಹ

ಜಿಲ್ಲೆಗೆ ಭಾರೀ ಮಳೆ, ಭೀಮಾನದಿ ಪ್ರವಾಹ ಕಾಡುತ್ತಿದೆ. ಜಿಲ್ಲೆಗೆ 3 ಬಾರಿ ಪ್ರವಾಹ ಕಾಡಿದೆ. ಆಗಸ್ಟ್‌ನಲ್ಲಿ 89,235 ಹೆಕ್ಟೇರ್ ಪ್ರದೇಶ ಹಾನಿಯಾಗಿ, 65 ಕೋಟಿ ನಷ್ಟವಾಗಿತ್ತು. ಸೆಪ್ಟೆಂಬರ್‌ನಲ್ಲಿ 1.89 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಹಾನಿ, 130 ಕೋಟಿ ರೂ. ನಷ್ಟದ ಅಂದಾಜು ಮಾಡಲಾಗಿದೆ. ಅಕ್ಟೋಬರ್‌ನಲ್ಲಿ ಭೀಮಾ ನದಿ ಪ್ರವಾಹದಿಂದ ಬಹುಪಾಲು ಬೆಳೆಗೆ ಹಾನಿಯಾಗಿದ್ದು ನಷ್ಟದ ಅಂದಾಜು ಮಾಡಲಾಗುತ್ತಿದೆ.

### ಗದಗ
#### 160 ಕೋಟಿ ಹಾನಿ

ಜಿಲ್ಲೆಯಲ್ಲಿ ಸುಮಾರು 160 ಕೋಟಿ ರೂ. ಹಾನಿ ಸಂಭವಿಸಿದೆ. ಆ.1ರಿಂದ 16ರವರೆಗೆ 736 ಮನೆಗಳು ಕುಸಿದಿವೆ. 41,491 ಹೆಕ್ಟೇರ್ ಕೃಷಿ, 12,290 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಒಟ್ಟಾರೆ 95,233 ಹೆಕ್ಟೇರ್ ಕೃಷಿ ಬೆಳೆ ಮತ್ತು 25,006.14 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಈವರೆಗೆ 1,615 ಮನೆಗಳು ಹಾನಿಗೀಡಾಗಿದ್ದು ಐವರು ಮೃತಪಟ್ಟಿದ್ದಾರೆ.

### ರಾಯಚೂರು
#### 171 ಕೋಟಿ ರೂ. ಲುಕ್ಸಾನು

ಮೂರು ತಿಂಗಳಿಂದ ಸುರಿದ ಮಳೆಗೆ ಬೆಳೆ, ಆಸ್ತಿ ಪಾಸ್ತಿ ಸೇರಿ 171 ಕೋಟಿ ರೂ. ಅಂದಾಜು ಹಾನಿಯಾಗಿದೆ. ಎನ್‌ಡಿಆರ್‌ಎಫ್ ಮಾರ್ಗಸೂಚಿಗಳನ್ವಯ 110 ಕೋಟಿ ರೂ. ಎಂದು ವರದಿ ನೀಡಲಾಗಿದೆ. ಆಗಸ್ಟ್, ಸೆಪ್ಟೆಂಬರ್‌ನಲ್ಲಿ 61.51 ಕೋಟಿ ರೂ. ಹಾನಿ, ಈ ತಿಂಗಳಲ್ಲಿ 49.06 ಕೋಟಿ ಹಾನಿಯಾಗಿದೆ. 23,745 ಹೆಕ್ಟೇರ್ ಪ್ರದೇಶಕ್ಕಿಂತ ಅಧಿಕ ಪ್ರಮಾಣದ ಕೃಷಿ, ತೋಟಗಾರಿಕೆ ಬೆಳೆಗಳು ಹಾನಿಗೀಡಾಗಿವೆ.

### ವಿಜಯಪುರ
#### 646 ಕೋಟಿ ರೂ.ನಷ್ಟ

ತೊಗರಿ, ಜೋಳ, ಈರುಳ್ಳಿ, ಗೋವಿನಜೋಳ ಹೀಗೆ ವಿವಿಧ ರೀತಿಯ ಬೆಳೆಗಳು ಹಾನಿಗೀಡಾಗಿವೆ. 1,60,739 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಬೆಳೆ ಹಾನಿಗೀಡಾಗಿದ್ದು 636 ಕೋಟಿ ರೂ. ಕೃಷಿ ಬೆಳೆ ಹಾನಿಯಾಗಿದೆ. 827 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ತೋಟಗಾರಿಕೆ ಬೆಳೆ ಹಾನಿಯಾಗಿದ್ದು ಕೃಷಿ-ತೋಟಗಾರಿಕೆ ಸೇರಿ 1,61,566 ಹೆಕ್ಟೇರ್ ಪ್ರದೇಶದಲ್ಲಿ 646.79 ಕೋಟಿ ರೂ. ಬೆಳೆ ಹಾನಿ ಆಗಿದೆ.